

# ದುಡ್ಡೂ ಹೋಯ್ತು, ಮೂರ್ಖತನವೂ ಬಯಲಾಯ್ತು

ಬೆಂಗಳೂರಿನಲ್ಲಿ ಒಂದು ಫ್ಲಾಟ್ ಖರೀದಿ ಮಾಡಿ, ವಾಸ್ತವ್ಯಕ್ಕೆ ಬಂದ ಹೊಸದು. ಮನೆಗೆ ಬೇಕಾದ ಅತ್ಯವಶ್ಯಕ ವಸ್ತುಗಳನ್ನು ಒಂದೊಂದಾಗಿ ಕೊಂಡು ಜೋಡಿಸಿಕೊಳ್ಳುತ್ತಿದ್ದ ಸಮಯ. ಆಗೊಬ್ಬರು ನಮ್ಮ ಮನೆಗೆ ಬಂದು, 'ನಾವು ಈ ಏರಿಯಾದ ಕೇಬಲ್ ಆಪರೇಟರ್ ಕಡೆಯಿಂದ ಬಂದಿದ್ದೇವೆ. ನಿಮಗೆ ಕೇಬಲ್ ಟೀವಿ ಕನೆಕ್ಷನ್ ಅವಶ್ಯಕತೆ ಇದೆಯೆಂದು ತಿಳಿದುಬಂತು, ಅದಕ್ಕೆ ಬಂದಿದ್ದೇವೆ' ಎಂದಾಗ ಮಡದಿ, ಮಕ್ಕಳು, 'ಹೌದು ನಮಗೆ ಅದು ಶೀಘ್ರವೇ ಬೇಕಾಗಿದೆ, ಯಾರನ್ನು ಕೇಳೋದು ಅಂದುಕೊಳ್ಳುತ್ತಿದ್ವಿ, ನೀವೇ ದೇವರಂತೆ ಮನೆ ಬಾಗಿಲಿಗೆ ಬಂದಿದ್ದೀರ' ಎಂದಾಗ, ಅವರು ಸಂಭ್ರಮದಿಂದ ತಮ್ಮ ಸ್ಕೀಮ್‌ಗಳನ್ನು ವಿವರಿಸಿದರು.

ಕೆಲವು ಕಾಮನ್ ಚಾನಲ್‌ಗಳು, ಕನ್ನಡ ಚಾನಲ್ ಎಲ್ಲಾ ಬರುತ್ತೆ ಎಂದಾಗ, ನಮಗೆ ತಮಿಳಿನ ಕೆಲವು ಚಾನಲ್ ನೋಡಿ ಅಭ್ಯಾಸವಾಗಿದೆ. ಅದನ್ನು ಕೊಡುತ್ತೀರಾ? ಎಂದು ಕೇಳಿದಾಗ, 'ಓಹೋ ಕೊಡುತ್ತೀವಿ. ಆದರೆ, ಅದಕ್ಕೆ ನೀವು ಹೊಸ ಸೆಟ್ ಟಾಪ್ ಬಾಕ್ಸ್ ಮತ್ತು ಮೂರು ವರ್ಷದ ಚಂದಾ ಒಟ್ಟಿಗೆ ಕಟ್ಟಿದರೆ ಕೊಡುತ್ತೇವೆ. ಇದರಿಂದ ತಿಂಗಳಾ ತಿಂಗಳ ಕಟ್ಟುವುದಕ್ಕೆ ಹೋಲಿಸಿದರೆ, ಸುಮಾರು ಎರಡು ಸಾವಿರ ನಿಮಗೆ ಲಾಭವಾಗುತ್ತೆ' ಎಂದರು.

ನಾವು ಸಮಾಲೋಚಿಸಿ, ಹೇಗಿದ್ದರೂ ಇದು ನಮ್ಮದೇ ಫ್ಲಾಟ್, ಇಲ್ಲಿ ಇದ್ದೇ ಇರ್ತೀವಿ ಎಂದು ಹೇಳುತ್ತಾ ಲೆಕ್ಕ ಮಾಡಿ, ಕೊನೆಗೆ ಸರಿಯೆಂದು ಅವರು ಹೇಳಿದ್ದಕ್ಕೆಲ್ಲಾ ತಲೆಯಾಡಿಸಿ, ಅವನಿಗೆ ಐದು ಸಾವಿರ ರೂಪಾಯಿ ಕೊಟ್ಟೆವು. ಅವರು ಸ್ವೀಕರಿಸಿ, ನಾನು ನಾಳೆ ರಸೀತಿಯೊಡನೆ ಬೆಳಿಗ್ಗೆ ಕೇಬಲ್, ಸೆಟ್ ಟಾಪ್ ಬಾಕ್ಸ್ ಎಲ್ಲಾ ತಂದು, ನೀವು ಕೇಳಿದ ಚಾನಲ್‌ಗಳನ್ನು ನೀಡುತ್ತೇವೆ ಎಂದಾಗ ಮನೆಯವರ ಸಂಭ್ರಮ ಹೇಳತೀರದು.

ಮಾರನೆಯ ದಿನ, ಹತ್ತಾಯಿತು, ಹನ್ನೊಂದಾಯಿತು, ಮಧ್ಯಾಹ್ನ ಮೂರಾಯಿತು. ಅವನ ಪತ್ತೆಯಿಲ್ಲ. ಅವರು ಕೊಟ್ಟಿದ್ದ ನಂಬರಿಗೆ ಫೋನ್ ಮಾಡಿದರೆ... ಇದು ಅಸ್ತಿತ್ವದಲ್ಲಿಲ್ಲ ಎಂದು ಬರುತ್ತಿತ್ತು. ಅಕ್ಕಪಕ್ಕದಲ್ಲಿ ವಿಚಾರಿಸಿದಾಗ, ಅವರು ಆ ಕೇಬಲ್ ಆಫೀಸಿನ ಬೇರೊಂದು ನಂಬರ್ ಕೊಟ್ಟರು.

ಅದಕ್ಕೆ ಫೋನ್ ಮಾಡಿದರೆ, ನಾವು ಯಾರೂ ನಿಮ್ಮ ಕಡೆ ಬರಲ್ಲ, ನಿಮ್ಮ ಕಡೆಗೆ ಬೇರೆ ಕೇಬಲ್ ಆಪರೇಟರ್ ಇದ್ದಾರೆ. ನಿಮ್ಮಲ್ಲಿಗೆ ಬಂದಿದ್ದವನನ್ನು ನಾವು ಆರು ತಿಂಗಳ ಕೆಳಗೆ ಕೆಲಸದಿಂದ ವಜಾ ಮಾಡಿದ್ದೆವು. ಅವನು ಹೀಗೆ ಸುಮಾರು ಕಡೆ ಮೋಸ ಮಾಡಿದ್ದಾನೆ ಅಂತ ತಿಳಿದುಬಂತು. ಈಗ ನೀವು ಸಹ ಅವನ ಬಲೆಗೆ ಬಿದ್ದು ಮೋಸ ಹೋಗಿದ್ದೀರಾ. ಹಣ ಕೊಡುವ ಮುಂಚೆ ಯಾವಾಗಲೂ ಅವರ ಆಫೀಸಿನಲ್ಲಿ ವಿಚಾರಿಸಿ, ಸರಿಯಾದ ರಸೀತಿ ಕೊಟ್ಟರೆ ಮಾತ್ರ ಕೊಡಬೇಕು ಅನ್ನುವ ಸಾಮಾನ್ಯ ಪ್ರಜ್ಞೆ ಇರಲಿಲ್ವಾ ಅಂತ ನಮಗೆ ಹೇಳಿದಾಗ... ಹಾಗೇ ಕ್ಯಾಲೆಂಡರ್ ನೋಡಿದೆ, ಅದು ಏಪ್ರಿಲ್ ತಿಂಗಳ ಮೊದಲ ತೇದಿಯೇನೂ ಆಗಿರಲಿಲ್ಲ!

—ವಿ. ವಿಜಯೇಂದ್ರ ರಾವ್



# ಹತ್ತಿರ ಬಂದ ಕಾರೂ, ಸರಗಳ್ಳತನವೂ...

ನಾನು ಅಮೆರಿಕಕ್ಕೆ ಹೋದಾಗ ನಡೆದ ಘಟನೆ. ಒಂದು ದಿನ ನನ್ನ ಮಗಳು ಮೊಬೈಲ್ ನೋಡುತ್ತಾ, ಅಲ್ಲಿನ ಕನ್ನಡ ಸಂಘದವರು ಕಳಿಸಿದ ಮೆಸೇಜೊಂದನ್ನು ಓದಿದಳು. ಅದರಲ್ಲಿ, 'ವಾಕಿಂಗ್ ಹೋಗುವಾಗ ಚಿನ್ನದ ಸರ ಹಾಕಿಕೊಳ್ಳಬೇಡಿ, ಕಳ್ಳರು ಬಂದಿದ್ದಾರೆ. ಕಾರಿನಲ್ಲಿ ಬಂದು ಗನ್ ತೋರಿಸಿ ಎಲ್ಲಾ ಕೊಡಿ ಎಂದು ಕೇಳುತ್ತಾರೆ, ಕೊಡದಿದ್ದರೆ ಶೂಟ್ ಮಾಡುತ್ತಾರೆ' ಎಂದು ಎಚ್ಚರಿಕೆ ನೀಡಲಾಗಿತ್ತು. ಅದನ್ನು ಕೇಳಿ ನಾನು ಎರಡು ದಿನ ವಾಕಿಂಗ್‌ಗೆ ಹೋಗುವಾಗ ಎಲ್ಲಾ ಆಭರಣಗಳನ್ನು ತೆಗೆದು ಮನೆಯಲ್ಲೇ ಇಟ್ಟು ಹೋಗುತ್ತಿದ್ದೆ.

ಎರಡು ದಿನ ಏನೂ ಆಗಲಿಲ್ಲ. ಹೀಗಾಗಿ ಮೂರನೇ ದಿನ ನಾನು ಮತ್ತೆ ಚಿನ್ನದ ಸರ ಹಾಕಿಕೊಂಡೇ ಹೊರಟೆ. ಆಗ ಇದ್ದಕ್ಕಿದ್ದಂತೆ ಒಂದು ಕಾರು ನನ್ನ ಬಳಿ ಬಂದು ನಿಂತಿತು. ನನಗೆ ತುಂಬಾ ಭಯವಾಗಿ ಮೈಯೆಲ್ಲಾ ಬೆವರತೊಡಗಿತು. ಯಾರು ಎಂದು ನೋಡಲು ಸಹ ಧೈರ್ಯವಾಗಲಿಲ್ಲ. ನಾನು ಬೇಗ ಬೇಗ ಮುಂದೆ ಓಡಿದೆ. ನಮ್ಮ ಮನೆಯವರು ಸ್ವಲ್ಪ ಮುಂದೆ ಇದ್ದರು. ಅವರನ್ನು ಜೋರಾಗಿ ಕೂಗಿ ಕರೆದೆ. ಅವರು ತಿರುಗಿ ಬರುವಷ್ಟರಲ್ಲಿ ಆ ಕಾರು ಅಲ್ಲಿಂದ ಹೊರಟಿತು. ಆ ದಿನ ನಾವು ವಾಕಿಂಗ್ ಮಾಡದೇ ಹಾಗೇ ಮನೆಗೆ ಹಿಂದಿರುಗಿದೆವು. ಮನೆಗೆ ಬಂದು ಈ ವಿಷಯವನ್ನು ಮಗಳಿಗೆ ಹೇಳುತ್ತಿದ್ದೆ.

ಆಗ ನನ್ನ ಅಳಿಯ ಕುಳಿತು ನಗುತ್ತಾ ಕೇಳುತ್ತಿದ್ದ. ನನಗೆ ಅನುಮಾನ ಬಂದು, 'ನೀನೇನಾ ಆ ಕಾರನ್ನು ನನ್ನ ಹತ್ತಿರ ತಂದು ನಿಲ್ಲಿಸಿದ್ದು?' ಎಂದು ಕೇಳಿದೆ.

ಅವನು ಜೋರಾಗಿ ನಗುತ್ತಾ, 'ಹೌದು!. ಆಫೀಸಿನಿಂದ ಮನೆಗೆ ಬರ್ತಾ ಇದ್ದೆ. ನಿಮ್ಮ ವಾಕಿಂಗ್ ಮುಗಿದಿದ್ರೆ ಮನೆಗ್ ಕರ್ಕೊಂಡ್ ಬರೋಣ ಅಂತ ಕಾರ್ ತಂದು ನಿಲ್ಲಿಸಿದೆ ಅಷ್ಟೇ' ಎಂದ. 'ಈಗ ತಾನೆ ಕಳ್ಳರ ಕಥೆ ಕೇಳಿದ್ದೆ, ನೀನೇ ಕಳ್ಳನಾ?' ಎಂದೆ ತಮಾಷೆಯಾಗಿ. ಅದನ್ನು ಕೇಳಿ ಎಲ್ಲರೂ ಜೋರಾಗಿ ನಗಲು ಶುರುಮಾಡಿದರು. ಭಯದ ಪ್ರಸಂಗ, ಕೊನೆಯಲ್ಲಿ ಹಾಸ್ಯವಾಗಿ ಮಾರ್ಪಟ್ಟಿತು.

—ಜಯಲಕ್ಷ್ಮಿ ಉಪಾಧ್ಯಾಯ ಕಂಚಾರ್ತಿ



## ಅಮ್ಮನಿಗೆ ಹೇಳದೇ ಉಳಿದ ಮಾತು

ಮೇ ತಿಂಗಳಲ್ಲಿ 'ಅಮ್ಮಂದಿರ ದಿನ'ವನ್ನು ಆಚರಿಸುತ್ತೇವೆ, ಉಡುಗೊರೆ ಕೊಟ್ಟು, ಅವರೊಟ್ಟಿಗೆ ಸಮಯ ಕಳೆದು. ದೂರದಲ್ಲಿರುವ ಅಮ್ಮನಿಗೆ, ಅಗಲಿದ ಅಮ್ಮನಿಗೆ ಹೇಳದೇ ಉಳಿದಿರುವ ಮಾತುಗಳಿದ್ದರೆ ಅವುಗಳಿಗೆ ಅಕ್ಷರ ರೂಪ ಕೊಡಿ. ಆ ದಿನವನ್ನು ಅತಿ ಪ್ರೀತಿಯಿಂದ ನೆನಪಿಸಿಕೊಂಡಂತೆಯೇ ಅಮ್ಮನಿಗೆ ಪ್ರೀತಿ ಮತ್ತು ಗೌರವವನ್ನು ಸಲ್ಲಿಸಿ. ಜೊತೆಗಿದ್ದೂ ಕೆಲವೊಮ್ಮೆ ಹೇಳಲಾಗದ ಮಾತುಗಳು ಉಳಿದಿರುತ್ತವೆ. ಅವಕ್ಕೆ ಈ ವಿಭಾಗ ನಿಮಗೆ ವೇದಿಕೆ ಒದಗಿಸುತ್ತಿದೆ. ಬರಹ ನುಡಿ ಅಥವಾ ಯುನಿಕೋಡ್‌ನಲ್ಲಿ 150 ಪದಮಿತಿಯಲ್ಲಿರಲಿ. ಕೊನೆಯ ದಿನಾಂಕ ಮೇ 28. ಬರಹ ಕಳುಹಿಸಬೇಕಾದ ವಿಳಾಸ: editorsu@sudha.co.in